# ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ

**(ಹಿಂದಿನ ಪದನಾಮ ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರ)**

ಕುಲಸಚಿವರ ಕಛೇರಿ, ಜ್ಞಾನಶಕ್ತಿ ಆವರಣ, Registrar Office, Torvi

ವಿಜಯಪುರ ☎:08352-229051 www.kswu.ac.in **Fax:** 08352 -229057


ಸಂಖ್ಯೆ:ಮವಿವಿ/ಶೈಕ್ಷಣಿಕ/ಸಿಂಡಿಕೇಟ್-98/2017-18/518 ದಿನಾಂಕ:30-05-2017

ಗೆ,
ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ
ಎಲ್ಲ ಸಿಂಡಿಕೇಟ್ ಸದಸ್ಯರುಗಳಿಗೆ

**ವಿಷಯ:** ದಿನಾಂಕ: 20-05-2017 ರಂದು ಮುಂಜಾನೆ 11:00 ಗಂಟೆಗೆ ವಿಶ್ವವಿದ್ಯಾನಿಲಯದ "ಜ್ಞಾನಶಕ್ತಿ (ತೊರವಿ) ಆವರಣ, ಆಡಳಿತ ಭವನದ ಸಿಂಡಿಕೇಟ್ ಹಾಲ್"ನಲ್ಲಿ ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು.

ಮಾನ್ಯರೆ,

ದಿನಾಂಕ: 20-05-2017 ರಂದು ಮುಂಜಾನೆ 11:00 ಗಂಟೆಗೆ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ "ಜ್ಞಾನಶಕ್ತಿ (ತೊರವಿ) ಆವರಣದ ಸಿಂಡಿಕೇಟ್ ಹಾಲ್"ನಲ್ಲಿ ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳನ್ನು ಇದರೊಂದಿಗೆ ಕಳುಹಿಸಲಾಗಿದೆ.

ವಂದನೆಗಳೊಂದಿಗೆ

ತಮ್ಮ ವಿಶ್ವಾಸಿ

**ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು**
**ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ವಿಜಯಪುರ**

**ಅಡಕ: ನಡವಳಿಗಳು 1 ರಿಂದ 13 ಪುಟಗಳು**

**<u>ಪ್ರತಿಗಳು:-</u>**

1. ಮಾನ್ಯ ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – 560001.
2. ಸರಕಾರದ ಪ್ರದಾನ ಕಾರ್ಯದರ್ಶಿಗಳು , ಶಿಕ್ಷಣ ಇಲಾಖೆ(ವಿಶ್ವವಿದ್ಯಾಲಯಗಳು) ಕರ್ನಾಟಕ ಸರ್ಕಾರ, ಬಹುಮಹಡಿಗಳ ಕಟ್ಟಡ ಡಾ॥ ಬಿ.ಆರ್.ಅಂಬೇಡ್ಕರ ವೀದಿ, ಬೆಂಗಳೂರು – 560001.
3. ಕಛೇರಿ ಪ್ರತಿ.

# ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರದ ಸಿಂಡಿಕೇಟ್ ಸದಸ್ಯರ ಪಟ್ಟಿ

| ಕ್ರ.ಸಂ | ಕರಾವಿ ಅಧಿನಿಯಮ 2000 ಪ್ರಕರಣ 28 | ಸದಸ್ಯರ ಹೆಸರು | ಪದನಾಮ | ಇಂದ | ವರೆಗೆ |
|---|---|---|---|---|---|
| 1. | 1(ಎ) | ಪ್ರೊ.ಸಬಿಹಾ, ಕುಲಪತಿಗಳು | ಸಭಾಧ್ಯಕ್ಷರು | 20-6-2016 | |
| 2. | 1(ಬಿ) | ಆಯುಕ್ತರು ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು | -- | |
| 3. | 1(ಸಿ) | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು | -- | |
| 4. | 1(ಡಿ) | ಪ್ರೊ.ವಿಜಯಾ ಕೋರಿಶೆಟ್ಟಿ, ಡೀನರು ಸಮಾಜ ವಿಜ್ಞಾನ ನಿಕಾಯ. | ಸದಸ್ಯರು | 4-11-2016 | 3-11-2017 |
| 5. | 1(ಇ) | ಶ್ರೀಮತಿ ಅರುಣಾಕುಮಾರಿ.ಎಸ್.ಕೆ | ಸದಸ್ಯರು | 11-04-2017 | 10-04-2020 |
| 6. | 1(ಇ) | ಶ್ರೀಮತಿ ಅನಘಾ ಅಚ್ಯುತ್ ಲಿಮಯೆ | ಸದಸ್ಯರು | 11-04-2017 | 10-04-2020 |
| 7. | 1(ಎಫ್) | ಶ್ರೀ ನಾನಾಗೌಡ ಹಿಪ್ಪರಗಿ | ಸದಸ್ಯರು | 02-12-2016 | 01-12-2017 |
| 8. | 1(ಎಫ್) | ಶ್ರೀಮತಿ ಬುಷಿರಾ ಬೇಗಂ | ಸದಸ್ಯರು | 02-12-2016 | 01-12-2017 |
| 9. | 1(ಎಫ್) | ಡಾ. ಬಿರಾದಾರ ಅರವಿಂದಕುಮಾರ | ಸದಸ್ಯರು | 02-12-2016 | 01-12-2017 |
| 10. | 1(ಎಫ್) | ಡಾ. ಹುಮೆರಾ ಸುಲ್ತಾನ | ಸದಸ್ಯರು | 02-12-2016 | 01-12-2017 |
| 11. | 1(ಜಿ) | ಡಾ.ಸತ್ಯಾನಂದ ಪಾತ್ರೋಟ | ಸದಸ್ಯರು | 19-02-2015 | 18-02-2018 |
| 12. | 1(ಜಿ) | ಶ್ರೀ.ಎಂ.ಎಲ್.ಶಾಂತಗಿರಿ | ಸದಸ್ಯರು | 19-02-2015 | 18-02-2018 |
| 13. | 1(ಜಿ) | ಡಾ.ಫರ್ಜಾನಾ.ಎಂ | ಸದಸ್ಯರು | 19-02-2015 | 18-02-2018 |
| 14. | 1(ಜಿ) | ಡಾ.ಸುಜಾತಾ ಎಸ್ ಜಂಗಮಶೆಟ್ಟಿ | ಸದಸ್ಯರು | 19-02-2015 | 18-02-2018 |
| 15. | 1(ಜಿ) | ಶ್ರೀ.ಆರ್.ಸಿ.ಪಾಟೀಲ | ಸದಸ್ಯರು | 19-02-2015 | 18-02-2018 |
| 16. | 1(ಜಿ) | ಶ್ರೀ.ರವೀಂದ್ರ ಭಾವಿಕಟ್ಟಿ | ಸದಸ್ಯರು | 19-02-2015 | 18-02-2018 |
| 17. | 1(ಹೆಚ್) | ಪ್ರೊ.ಮಹೇಶ ಐ ಚಿಂತಾಮಣಿ, ಪ್ರಾಧ್ಯಾಪಕರು, ಕನ್ನಡ ಅಧ್ಯಯನ ವಿಭಾಗ | ಸದಸ್ಯರು | 01-06-2016 | 31-05-2017 |
| 18. | 1(ಐ) | ನಿರ್ದೇಶಕರು ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು | -- | |
| 19. | 1(ಜೆ) | ಜಂಟಿ ನಿರ್ದೇಶಕರು, ಧಾರವಾಡ | ಸದಸ್ಯರು | -- | |
| 20. | 1(ಕೆ) | ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು | -- | |
| 21. | | ಕಾರ್ಯದರ್ಶಿಗಳು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಬೆಂಗಳೂರು | ಸದಸ್ಯರು | -- | -- |
| 22. | ಪ್ರಕರಣ 18(2) | ಪ್ರೊ.ವಿ.ವಿ.ಮಳಗಿ, ಕುಲಸಚಿವರು(ಮೌ) | ಸದಸ್ಯರು | 14-7-2016 | |
| 23. | ಪ್ರಕರಣ 17(2) | ಪ್ರೊ. ಕೆ.ಪಿ.ಶ್ರೀನಾಥ್, ಕುಲಸಚಿವರು | ಸದಸ್ಯ – ಕಾರ್ಯದರ್ಶಿ | 18-06-2016 | |

## ದಿನಾಂಕ:20-05-2017 ರಂದು ಮುಂಜಾನೆ 11:00ಗಂಟೆಗೆ, ಸಿಂಡಿಕೇಟ್ ಸಭಾಂಗಣ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ ಇಲ್ಲಿ ಜರುಗಿದ ಸಿಂಡಿಕೇಟ್ ವಿಶೇಷ ಸಭೆಯ ನಡವಳಿಗಳು

**ಸಭೆಗೆ ಹಾಜರಾದ ಸದಸ್ಯರು**

| | | |
|---|---|---|
| 1. | ಪ್ರೊ. ಸಬಿಹಾ, ಕುಲಪತಿಗಳು | : ಸಭಾಧ್ಯಕ್ಷರು |
| 2. | ಪ್ರೊ. ವಿಜಯಾ ಕೋರಿಶೆಟ್ಟಿ, ಡೀನರು ಸಮಾಜ-ವಿಜ್ಞಾನ ನಿಕಾಯ | : ಸದಸ್ಯರು |
| 3. | ಶ್ರೀಮತಿ ಅರುಣಾಕುಮಾರಿ.ಎಸ್.ಕೆ | : ಸದಸ್ಯರು |
| 4. | ಶ್ರೀಮತಿ ಅನಘಾ ಅಚ್ಯುತ್ ಲಿಮಯೆ | : ಸದಸ್ಯರು |
| 5. | ಶ್ರೀ ನಾನಾಗೌಡ ಹಿಪ್ಪರಗಿ | : ಸದಸ್ಯರು |
| 6. | ಶ್ರೀಮತಿ ಬುಷಿರಾ ಬೇಗಂ | : ಸದಸ್ಯರು |
| 7. | ಡಾ.ಬಿರಾದಾರ ಅರವಿಂದಕುಮಾರ | : ಸದಸ್ಯರು |
| 8. | ಡಾ.ಹುಮೆರಾ ಸುಲ್ತಾನ | : ಸದಸ್ಯರು |
| 9. | ಡಾ.ಸತ್ಯಾನಂದ ಪಾತ್ರೋಟ | : ಸದಸ್ಯರು |
| 10. | ಡಾ.ಫರ್‌ಜಾನಾ ಎಂ | : ಸದಸ್ಯರು |
| 11. | ಡಾ.ಸುಜಾತಾ ಜಂಗಮಶೆಟ್ಟಿ | : ಸದಸ್ಯರು |
| 12. | ಶ್ರೀ ಆರ್.ಬಿ.ಭಾವಿಕಟ್ಟಿ | : ಸದಸ್ಯರು |
| 13. | ಶ್ರೀ ಆರ್.ಸಿ.ಪಾಟೀಲ | : ಸದಸ್ಯರು |
| 14. | ಪ್ರೊ. ಮಹೇಶ ಐ ಚಿಂತಾಮಣಿ, ಪ್ರಾಧ್ಯಾಪಕರು, ಕನ್ನಡ ಅಧ್ಯಯನ ವಿಭಾಗ | : ಸದಸ್ಯರು |
| 15. | ಪ್ರೊ.ವಿ.ವಿ.ಮಳಗಿ, ಕುಲಸಚಿವರು (ಮೌಲ್ಯಮಾಪನ) | : ಸದಸ್ಯರು |
| 16. | ಪ್ರೊ.ಕೆ.ಪಿ.ಶ್ರೀನಾಥ, ಕುಲಸಚಿವರು | : ಸದಸ್ಯ ಕಾರ್ಯದರ್ಶಿ |

**ಸಭೆಗೆ ಗೈರು ಹಾಜರಾದ ಸದಸ್ಯರು**

| | | |
|---|---|---|
| 1. | ಪ್ರೊ. ಮಲ್ಲೇಶ್ವರಪ್ಪಾ, ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ,ಧಾರವಾಡ | : ಸದಸ್ಯರು |
| 2. | ಶ್ರೀ ಮುದುಕಪ್ಪ ಲಕ್ಷ್ಮಪ್ಪ ಶಾಂತಗಿರಿ | : ಸದಸ್ಯರು |
| 3. | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು | : ಸದಸ್ಯರು |
| 4. | ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು | : ಸದಸ್ಯರು |
| 5. | ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು | : ಸದಸ್ಯರು |
| 6. | ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು | : ಸದಸ್ಯರು |
| 7. | ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಬೆಂಗಳೂರು | : ಸದಸ್ಯರು |

ಮಾನ್ಯ ಕುಲಪತಿಗಳಾದ ಪ್ರೊ.ಸಬಿಹಾ ಘನತೆವೆತ್ತ ಕುಲಾಧಿಪತಿಗಳಿಂದ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯದ ಅಧಿನಿಯಮ 2000 ಪ್ರಕರಣ 28 (1)(ಇ) ಅನ್ವಯ ನಾಮನಿರ್ದೇಶನಗೊಂಡ ಸದಸ್ಯರಾದ ಶ್ರೀಮತಿ ಅರುಣಾಕುಮಾರಿ.ಎಸ್.ಕೆ ಅವರನ್ನು ಸ್ವಾಗತಿಸಿ ಎಲ್ಲ ಸದಸ್ಯರನ್ನು ಪರಿಚಯಿಸಿದರು. ಮುಂದುವರಿದು ಸಭೆಯಲ್ಲಿರುವ ಎಲ್ಲ ಸದಸ್ಯರನ್ನು ಸ್ವಾಗತಿಸಿ, ಕಾರ್ಯಸೂಚಿಯನ್ನು ಮಂಡಿಸಲು ಕುಲಸಚಿವರಿಗೆ ತಿಳಿಸಿದರು.

**<u>ದಿನಾಂಕ:20–05–2017ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು</u>**

ದಿನಾಂಕ: 14–03–2017 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳನ್ನು ದೃಢೀಕರಿಸುವುದು.

**ನಿರ್ಣಯ:–**

**ದಿನಾಂಕ:14–03–2017 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳನ್ನು ದೃಢೀಕರಿಸಲಾಯಿತು.**

ದಿನಾಂಕ: 16–04–2017 ರಂದು ಜರುಗಿದ ಸಿಂಡಿಕೇಟ್ ವಿಶೇಷ ಸಭೆಯ ನಡವಳಿಗಳನ್ನು ದೃಢೀಕರಿಸುವುದು.

**ನಿರ್ಣಯ:–**

**ದಿನಾಂಕ:16–04–2017 ರಂದು ಜರುಗಿದ ಸಿಂಡಿಕೇಟ್ ವಿಶೇಷ ಸಭೆಯ ನಡವಳಿಗಳನ್ನು ದೃಢೀಕರಿಸಲಾಯಿತು.**

ದಿನಾಂಕ: 08–02–2017 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳ ಮೇಲೆ ತೆಗೆದುಕೊಂಡ ಕ್ರಮದ ಬಗ್ಗೆ.

**ನಿರ್ಣಯ:–**

**ಒಪ್ಪಿಕೊಳ್ಳಲಾಯಿತು.**

**<u>ದಿನಾಂಕ:14–03–2017ರಂದು ಜರುಗಿದ 97ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ಮುಂದೂಡಿದ ವಿಷಯ</u>**

## *ಸಿಂಡಿಕೇಟ್ ಐಟಂ ಸಂಖ್ಯೆ : 17/97* *ದಿನಾಂಕ:14–03–2017*

**ಸಿಂಡಿಕೇಟ್ ಸದಸ್ಯರಾದ ಮಾನ್ಯ ಆರ್.ಬಿ.ಭಾವಿಕಟ್ಟಿ ಅವರು ಈ ಕೆಳಕಂಡ ಪ್ರಸ್ತಾವನೆ ಸಲ್ಲಿಸಿರುತ್ತಾರೆ.**

ವಿಷಯ:– **ಪಿ.ಡಬ್ಲೂ.ಜಿ–34** ಅಡಿಯಲ್ಲಿ ವಿವಿಧ ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕೇತರ ಸಿಬ್ಬಂಧಿಗಳ ವೇತನ ಹೆಚ್ಚಿಸುವ ಕುರಿತು.

**ನಿರ್ಣಯ:–**

**ಪಿ.ಡಬ್ಲೂ.ಜಿ–34 ರ ವೇತವನ್ನು ಸರಕಾರ ಮುಂದಿನ ದಿನಗಳಲ್ಲಿ ಹೆಚ್ಚಿಸಿದ ನಂತರ ಪ್ರಸ್ತಾಪಿಸುವುದು ಎಂದು ನಿರ್ಣಯಿಸಲಾಯಿತು.**

**<u>ದಿನಾಂಕ:20–05–2017ರಂದು ಜರುಗಿದ 98ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು</u>**

# <u>ಹೊಸ ವಿಷಯಗಳು</u>

## *ಸಿಂಡಿಕೇಟ್ ಐಟಂ ಸಂಖ್ಯೆ : 02*

**ವಿಷಯ:–** ವಿಶ್ವವಿದ್ಯಾನಿಲಯದ ವಿವಿಧ ಉಪ–ಸಮಿತಿಗಳನ್ನು ರಚಿಸುವ ಕುರಿತು
**ಉಲ್ಲೇಖ:–**1.ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ಪ್ರಕರಣ 37ರ ಪ್ರಕಾರ
2.ಸರಕಾರದ ಪತ್ರ ಸಂಖ್ಯೆ:ಇಡಿ19ಎಂವಿಎಸ್2009 ದಿನಾಂಕ:1–4–2011
3.KSWUB/Const.BC/2016-17/1298 date:02-08-2016

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖಗಳಿಗೆ ಸಂಬಂಧಿಸಿದಂತೆ ವಿಶ್ವವಿದ್ಯಾಲಯದ ಆಡಳಿತ ನಿರ್ವಹಣೆಗಾಗಿ ವಿವಿಧ ಉಪ-ಸಮಿತಿಗಳನ್ನು ಮಾನ್ಯ ಕುಲಪತಿಗಳ ನಿರ್ದೇಶನದ ಪ್ರಕಾರ (ಉಲ್ಲೇಖ:1,2,3) ಅಧಿಸೂಚನೆಯಂತೆ ರಚನೆ ಮಾಡಲಾಗಿತ್ತು. ಸದರಿ ಸಮಿತಿಗಳನ್ನು ಪುನರಚಿಸಲು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:-**

**ವಿಶ್ವವಿದ್ಯಾನಿಲಯದ ವಿವಿಧ ಉಪ-ಸಮಿತಿಗಳನ್ನು ರಚಿಸಲು ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಲಾಯಿತು.**

## ದಿನಾಂಕ:20-05-2017ರಂದು ಜರುಗಿದ 98ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು

# *ಸಿಂಡಿಕೇಟ್ ಐಟಂ ಸಂಖ್ಯೆ: 03*

**ವಿಷಯ:** 2017-18ನೇ ಶೈಕ್ಷಣಿಕ ಸಾಲಿನ ಸಂಲಗ್ನತೆ ಕುರಿತು.

**ಉಲ್ಲೇಖ:**1) ವಿದ್ಯಾವಿಷಯಕ ಪರಿಷತ್ ಸಭೆಯ ದಿನಾಂಕ:10-03-2017.

2) ಸಿಂಡಿಕೇಟ್ ಸಭೆಯ ದಿನಾಂಕ: 14-03-2017.

3) ಕಾರ್ಯದರ್ಶಿಗಳು ಇಂದಿರಾಗಾಂಧಿ ಮೆಮೋರಿಯಲ್ ವಿದ್ಯಾಸಂಸ್ಥೆ(ರಿ) ಇವರ ಹೊಸ ಕಾಲೇಜು ಪ್ರಸ್ತಾವನೆ ದಿನಾಂಕ:16-03-2017.

4) ಸ್ಥಾನಿಕ ವಿಚಾರಣಾ ಸಮಿತಿ ವರದಿ ದಿನಾಂಕ:22-03-2017 (ಇಂದಿರಾಗಾಂಧಿ ಮೆಮೋರಿಯಲ್ ವಿದ್ಯಾಸಂಸ್ಥೆ ಹಗರಿಬೊಮ್ಮನಹಳ್ಳಿ)

5) ವಿಶೇಷ ತಜ್ಞರ ಸಮಿತಿ ಎಂ.ಎ ಮ್ಯೂಸಿಕ ವರದಿ ದಿನಾಂಕ:30-03-2017, (ಎಸ್.ಜೆ.ಎಂ.ವಿ ಕಾಲೇಜು ಹುಬ್ಬಳ್ಳಿ)

6) ಗುಜ್ಜಮ್ಮ ಶಿಕ್ಷಣ ಸಂಸ್ಥೆಯ ಬಿ.ಇಡಿ ಮತ್ತು ಪದವಿ ಕೋರ್ಸುಗಳ ಮುಂದುವರಿಕೆ ಸಂಯೋಜನೆಗೆ ತಡವಾಗಿ ಪ್ರಸ್ತಾವನೆ ಸಲ್ಲಿಸಿದ ದಿನಾಂಕ:04-04-2017.

7) ರಾಷ್ಟ್ರೀಯ ಮಹಿಳಾ ಪದವಿ ಮಹಾವಿದ್ಯಾಲಯ, ಲಿಂಗಸಗೂರು ಇವರ ಮನವಿ ಪತ್ರ ದಿನಾಂಕ:17-04-2017.

8) ಇಖ್ರಾ ಮಹಿಳಾ ಪದವಿ ಮಹಾವಿದ್ಯಾಲಯ, ಶಿರಸಿ ಇವರ ಮನವಿ ಪತ್ರ ದಿನಾಂಕ:24-04-2017.

1. ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ 03 ರನ್ವಯ ಕಾರ್ಯದರ್ಶಿಗಳು ಇಂದಿರಾಗಾಂಧಿ ಮೆಮೋರಿಯಲ್ ವಿದ್ಯಾಸಂಸ್ಥೆ(ರಿ) ಹಗರಿಬೊಮ್ಮನಹಳ್ಳಿ, ಇವರು ತಡವಾಗಿ ಹೊಸ ಕಾಲೇಜು ಸಂಯೋಜನೆಗೆ ದಂಡ ಶುಲ್ಕದೊಂದಿಗೆ ಅರ್ಜಿಯನ್ನು ಸಲ್ಲಿಸಿದ್ದು, ಸದರಿ ವಿದ್ಯಾಸಂಸ್ಥೆಗೆ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ, ಸ್ಥಾನಿಕ ವಿಚಾರಣಾ ಸಮಿತಿಯು ಉಲ್ಲೇಖಿತ 04 ರಂತೆ ತಪಾಸಣೆ ಮಾಡಿ ದಿನಾಂಕ:21-03-2017 ರಂದು ಮಂಜೂರಾತಿ ಶಿಫಾರಸ್ಸು ವರದಿಯನ್ನು ಸಲ್ಲಿಸಿರುತ್ತಾರೆ. ಸದರಿ ಶಿಫಾರಸ್ಸನ್ನು ಸರ್ಕಾರಕ್ಕೆ ಸಲ್ಲಿಸಲು ತಮ್ಮ ಅವಾಗಹನೆಗೆ ಇಡಲಾಗಿದೆ.

**ನಿರ್ಣಯ:- ಇಂದಿರಾಗಾಂಧಿ ಮೆಮೋರಿಯಲ್ ವಿದ್ಯಾಸಂಸ್ಥೆ(ರಿ) ಹಗರಿಬೊಮ್ಮನಹಳ್ಳಿ, ಇವರ ಹೊಸ ಕಾಲೇಜು ಸಂಯೋಜನೆಗೆ ಸಮಿತಿಯ ಶಿಫಾರಸ್ಸು ಮಾಡಿದಂತೆ ಸ್ನಾತಕ ಬಿ.ಎ(ಇತಿಹಾಸ+ಅರ್ಥಶಾಸ್ತ್ರ+ರಾಜ್ಯಶಾಸ್ತ್ರ, ಇತಿಹಾಸ+ಶಿಕ್ಷಣ+ರಾಜ್ಯಶಾಸ್ತ್ರ, ಇತಿಹಾಸ+ಕನ್ನಡ+ಮಹಿಳಾಅಧ್ಯಯನ, ಇತಿಹಾಸ+ಇಂಗ್ಲೀಷ+ಸಮಾಜಶಾಸ್ತ್ರ) ಹಾಗೂ ಬಿ.ಕಾಂ Intake 60**

**ವಿದ್ಯಾರ್ಥಿನಿಯರು ನೀಡಲು ಒಪ್ಪಿಕೊಳ್ಳಲಾಯಿತು. ಹಾಗೂ ಸದರಿ ಶಿಫಾರಸ್ಸನ್ನು ಸರ್ಕಾರಕ್ಕೆ ಸಲ್ಲಿಸಲು ಅವಗಾಹನಿಸಲಾಯಿತು.**

2. ಉಲ್ಲೇಖ 1 ಮತ್ತು 2 ರ ಸಭೆಗಳ ನಿರ್ಣಯದಂತೆ, ಎಸ್.ಜೆ.ಎಂ.ವಿ ಕಲಾ ಮತ್ತು ವಾಣಿಜ್ಯ ಪದವಿ ಮಹಿಳಾ ಮಹಾವಿದ್ಯಾಲಯ ಹುಬ್ಬಳ್ಳಿಗೆ, ವಿಶೇಷ ತಜ್ಞರ ಸಮಿತಿ ಭೇಟಿ ನೀಡಿ ಎಂ.ಎ ಮ್ಯೂಸಿಕ್ ಸ್ನಾತಕೋತ್ತರ ಸಂಯೋಜನೆಗೆ ಪರೀಶಿಲನೆ ಮಾಡಿ ಉಲ್ಲೇಖಿತ 05 ರಂತೆ ದಿನಾಂಕ:30-03-2017 ರಂದು ಶಿಫಾರಸ್ಸು ವರದಿಯನ್ನು ಸಲ್ಲಿಸಿರುತ್ತಾರೆ. ಸದರಿ ಶಿಫಾರಸ್ಸನ್ನು ಸರ್ಕಾರಕ್ಕೆ ಸಲ್ಲಿಸಲು ತಮ್ಮ ಅವಾಗಹನೆಗೆ ಇಡಲಾಗಿದೆ.

**ನಿರ್ಣಯ:**

**ಎಸ್.ಜೆ.ಎಂ.ವಿ ಕಲಾ ಮತ್ತು ವಾಣಿಜ್ಯ ಪದವಿ ಮಹಿಳಾ ಮಹಾವಿದ್ಯಾಲಯ ಹುಬ್ಬಳ್ಳಿ, ಅವರಿಗೆ ಎಂ.ಎ ಮ್ಯೂಸಿಕ್ ಸ್ನಾತಕೋತ್ತರ ಸಂಯೋಜನೆಗೆ ಸ್ಥಾನಿಕ ವಿಚಾರಣಾ ಸಮಿತಿಯ ವರದಿಯನ್ನು ಆಧರಿಸಿ ಕಾಲೇಜಿನ ಸಂಯೋಜನೆಯ ಪ್ರಸ್ತಾವನೆಯನ್ನು ತಿರಸ್ಕರಿಸಲಾಯಿತು.**

3. ಹಾಗೂ ಗುಜ್ಜಮ್ಮ ಶಿಕ್ಷಣ ಮಹಿಳಾ ಮಹಾವಿದ್ಯಾಲಯ ಭಾಲ್ಕಿ, ಮತ್ತು ಆದಿತ್ಯ ಮಹಿಳಾ ಪದವಿ ಮಹಾವಿದ್ಯಾಲಯ ಭಾಲ್ಕಿ ಇವರು ತಡವಾಗಿ ಶೈಕ್ಷಣಿಕ 2017-18 ನೇ ಸಾಲಿಗೆ ಮುಂದುವರಿಕೆ ಸಂಯೋಜನೆಗಾಗಿ ಪ್ರಸ್ತಾವನೆಯನ್ನು ದಂಡ ಶುಲ್ಕದೊಂದಿಗೆ ದಿನಾಂಕ:04-04-2017 ರಂದು ಸಲ್ಲಿರುತ್ತಾರೆ. ಕಾರಣ ಸದರಿ ಎರಡು ಕಾಲೇಜುಗಳಿಗೆ ಸ್ಥಾನಿಕ ವಿಚಾರಣಾ ಸಮಿತಿ(LIC) ತಪಾಸಣೆಗಾಗಿ ಕಳುಹಿಸಲು, ಹಾಗೂ ತಪಾಸಣೆ ವೆಚ್ಚವನ್ನು ಸದರಿ ಕಾಲೇಜುಗಳು ಎಷ್ಟು ಮೊತ್ತವನ್ನು ಭರಿಸಬೇಕು ಎಂದು ಸೂಚಿಸಲು ಸಭೆಯ ಅವಗಾಹನೆಗೆ ಇಡಲಾಗಿದೆ.

**ನಿರ್ಣಯ:**

1. **ಶೈಕ್ಷಣಿಕ 2017-18 ನೇ ಸಾಲಿಗೆ ಗುಜ್ಜಮ್ಮ ಶಿಕ್ಷಣ ಮಹಿಳಾ ಮಹಾವಿದ್ಯಾಲಯ ಭಾಲ್ಕಿ, ಮತ್ತು ಆದಿತ್ಯ ಮಹಿಳಾ ಪದವಿ ಮಹಾವಿದ್ಯಾಲಯ ಭಾಲ್ಕಿ ಇವರು ತಡವಾಗಿ ಮುಂದುವರಿಕೆ ಸಂಯೋಜನೆ ಪ್ರಸ್ತಾವನೆಗೆ, ಸ್ಥಾನಿಕ ವಿಚಾರಣಾ ಸಮಿತಿ(LIC) ತಪಾಸಣೆಗಾಗಿ ಕಳುಹಿಸಲು ಅನುಮೋದಿಸಲಾಯಿತು.**
2. **ಶಿಕ್ಷಣ ಕಾಲೇಜಗೆ ರೂ.30,000/- ಹಾಗೂ ಪದವಿ ಕಾಲೇಜಿಗೆ ರೂ.10,000/- ಮರು ತಪಾಸಣೆ ಶುಲ್ಕ ನಿಗದಿಪಡಿಸಲು ತೀರ್ಮಾನಿಸಲಾಯಿತು.**

4. ಹಾಗೂ ಉಲ್ಲೇಖ 1 ಮತ್ತು 2 ರ ಸಭೆಗಳ ನಿರ್ಣಯದಂತೆ, ಶೈಕ್ಷಣಿಕ 2017-18 ನೇ ಸಾಲಿಗೆ ಮುಂದುವರಿಕೆ ಸಂಲಗ್ನತೆಗಾಗಿ ಪ್ರಸ್ತಾವನೆ ಸಲ್ಲಿಸಿಲ್ಲದ 13 ಕಾಲೇಜುಗಳಿಗೆ ದಿನಾಂಕ: 12-04-2017 ಕ್ಕೆ ವಿಶ್ವವಿದ್ಯಾನಿಲಯಕ್ಕೆ ವಿವರಣೆಯನ್ನು ನೀಡುವಂತೆ ಪತ್ರವನ್ನು ಕಳುಹಿಸಲಾಗಿತ್ತು, ಅದರಂತೆ ಗುಜ್ಜಮ್ಮ ಶಿಕ್ಷಣ ಸಂಸ್ಥೆಯ ಎರಡು ಕಾಲೇಜುಗಳು ಮಾತ್ರ ಮುಂದುವರಿಕೆ ಸಂಲಗ್ನತೆಗೆ ದಂಡಶುಲ್ಕದೊಂದಿಗೆ ಪ್ರಸ್ತಾವನೆ ಸಲ್ಲಿಸಿದ್ದು, ಉಳಿದ ಬಾಕಿ 11 ಕಾಲೇಜುಗಳಲ್ಲಿ **ರಾಷ್ಟ್ರೀಯ ಮಹಿಳಾ ಕಾಲೇಜು ಲಿಂಗಸಗೂರ** ಇವರು 2018-19 ನೇ ಸಾಲಿನಿಂದ ಮುಂದುವರೆಸಲು ಮನವಿ ಪತ್ರ ನೀಡಿರುತ್ತಾರೆ, ಹಾಗೂ **ಇಖ್ರಾ ಮಹಿಳಾ ಕಾಲೇಜು ಶಿರಸಿ** ಇವರು ವಿದ್ಯಾರ್ಥಿಗಳ ಪ್ರವೇಶಾತಿ ಇಲ್ಲದ ಕಾರಣ ಕೆಲವು ವರ್ಷಗಳ ಕಾಲವಕಾಶ ನೀಡುವಂತೆ ಮನವಿ ಪತ್ರ ಸಲ್ಲಿಸಿರುತ್ತಾರೆ, ಉಳಿದಂತ 9 ಕಾಲೇಜುಗಳಿಂದ ಯಾವುದೇ ಪ್ರತಿಕ್ರಿಯೆ ವಿಶ್ವವಿದ್ಯಾಲಯಕ್ಕೆ ಇದೂವರೆಗೂ ಬಂದಿರುವುದಿಲ್ಲ, ಅದಕಾರಣ ಈ 11 ಕಾಲೇಜುಗಳಿಗೆ ಮುಂದಿನ ಕ್ರಮಕ್ಕಾಗಿ ಈ ಸಭೆಯ ಅವಗಾಹನೆಗೆ ಇಡಲಾಗಿದೆ.

**ನಿರ್ಣಯ:**

1. **ರಾಷ್ಟ್ರೀಯ ಮಹಿಳಾ ಕಾಲೇಜು ಲಿಂಗಸಗೂರ ಇವರು 2018-19 ನೇ ಸಾಲಿನಿಂದ ಮುಂದುವರೆಸಲು ಸಲ್ಲಿಸಿರುವ ಮನವಿ ಪತ್ರ, ಹಾಗೂ ಇಖ್ರಾ**

**ಮಹಿಳಾ ಕಾಲೇಜು ಶಿರಸಿ ಇವರು ವಿದ್ಯಾರ್ಥಿಗಳ ಪ್ರವೇಶಾತಿ ಇಲ್ಲದ ಕಾರಣ ಕೆಲವು ವರ್ಷಗಳ ಕಾಲಾವಕಾಶ ನೀಡುವಂತೆ ಸಲ್ಲಿಸಿರುವ ಮನವಿ ಪತ್ರ ಪರಿಶೀಲಿಸಿ, ಕಡ್ಡಾಯವಾಗಿ ಸದರಿ ಕಾಲೇಜಿನವರು ಮುಂದುವರಿಕೆ ಶುಲ್ಕ ಪಾವತಿಸಲು ನೋಟಿಸ್ ಜಾರಿ ಮಾಡಬೇಕೆಂದು ತೀರ್ಮಾನಿಸಲಾಯಿತು.**

2. **ಮುಂದೂವರೆದು 9 ಕಾಲೇಜುಗಳ ಕುರಿತು ಮತ್ತೊಮ್ಮೆ ಪರಿಶೀಲಿಸಿ ಮುಂದಿನ ಕ್ರಮಕೈಗೊಳ್ಳಲು ಮಾನ್ಯ ಕುಲಪತಿ ಹಾಗೂ ಕುಲಸಚಿವರಿಗೆ ಅಧಿಕಾರ ನೀಡಲಾಯಿತು.**

## <u>ದಿನಾಂಕ:20-05-2017ರಂದು ಜರುಗಿದ 98ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು</u>

# *ಸಿಂಡಿಕೇಟ್ ಐಟಂ ಸಂಖ್ಯೆ: 04*

**ವಿಷಯ:-** ಡಾ. ಆರ್.ವಿ. ಗಂಗಶೆಟ್ಟಿ, ಸಹಾಯಕ ಪ್ರಾಧ್ಯಾಪಕರು, ಅರ್ಥಶಾಸ್ತ್ರ ಅಧ್ಯಯನ ವಿಭಾಗ ಇವರ ವೇತನ ಶ್ರೇಣಿಯಲ್ಲಿ AGP ಯನ್ನು ರೂ. 7000/- ರಿಂದ 8000/- ಗಳ ಬಡ್ತಿಗೆ ಅರ್ಹರಾಗುವ ದಿ:13-7-2016.

**ಉಲ್ಲೇಖ:-**1. Screening Cum evaluation Committee ಸಭೆಯ ನಡಾವಳಿಯ ದಿ: 21-12-2016.
2. ಸಿಂಡಿಕೇಟ ವಿಶೇಷ ಸಭೆಯ ನಡಾವಳಿ ದಿ: 10-1-2017.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಡಾ. ಆರ್.ವಿ. ಗಂಗಶೆಟ್ಟಿ, ಇವರು ಮಹಿಳಾ ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ಅಧ್ಯಯನ ವಿಭಾಗದ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ದಿ: 13-7-2007 ರಂದು ಹಾಜರಾಗಿರುವುದರಿಂದ ಸದರಿಯವರು AGP ರೂ. 7000/- ರಿಂದ 8000/- ಗಳ ಬಡ್ತಿಗೆ ದಿ: 13-7-2016 ರಂದು ಅರ್ಹರಾಗುವರು. ಈ ವಿಷಯವನ್ನು ಸಿಂಡಿಕೇಟ್ ಸಭೆ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:- ಡಾ. ಆರ್.ವಿ. ಗಂಗಶೆಟ್ಟಿ, ಸಹಾಯಕ ಪ್ರಾಧ್ಯಾಪಕರು, ಅರ್ಥಶಾಸ್ತ್ರ ಅಧ್ಯಯನ ವಿಭಾಗ ಇವರ ವೇತನ ಶ್ರೇಣಿಯಲ್ಲಿ AGP ಯನ್ನು ರೂ. 7000/- ರಿಂದ 8000/- ಗಳ ಬಡ್ತಿಗೆ ಅರ್ಹರಾಗುವ ದಿ:13-7-2016ರಿಂದ ನೀಡಲು ಅನುಮೋದಿಸಲಾಯಿತು.**

## <u>ದಿನಾಂಕ:20-05-2017ರಂದು ಜರುಗಿದ 98ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು</u>

# *ಸಿಂಡಿಕೇಟ್ ಐಟಂ ಸಂಖ್ಯೆ: 05*

**ವಿಷಯ:-** ಡಾ. ಹನುಮಂತಯ್ಯ ಪೂಜಾರಿ, ಸಹಾಯಕ ಪ್ರಾಧ್ಯಾಪಕರು, ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಜ್ಞಾನ ಅಧ್ಯಯನ ವಿಭಾಗ ಇವರ ವೇತನ ಶ್ರೇಣಿಯಲ್ಲಿ AGP ಯನ್ನು ರೂ. 6000/- ರಿಂದ 7000/-ಗಳ ಬಡ್ತಿಗೆ ಅರ್ಹರಾಗುವ ದಿ:10-08-2014 ರ ಬದಲಾಗಿ ದಿ:08-02-2014 ಎಂಬ ಮನವಿಯ ಬಗ್ಗೆ.

**ಉಲ್ಲೇಖ:-**1. Screening Cum evaluation Committee ಸಭೆಯ ನಡಾವಳಿಯ ದಿ:21-12-2016.
2. ಸಿಂಡಿಕೇಟ ವಿಶೇಷ ಸಭೆಯ ನಡಾವಳಿ ದಿ: 10-1-2017.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಡಾ. ಹನುಮಂತಯ್ಯ ಪೂಜಾರಿ, ಇವರು ಮಹಿಳಾ ವಿಶ್ವವಿದ್ಯಾಲಯದ ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಜ್ಞಾನ ಅಧ್ಯಯನ ವಿಭಾಗದ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ದಿ: 10–8–2012 ರಂದು ಹಾಜರಾಗಿರುವರು ಹಾಗೂ ಸದರಿಯವರು ಎಸ್. ಎ. ವಿ. ಟಿ. ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಕೂಡ್ಲಿಗಿಯಲ್ಲಿ ದೈಹಿಕ ಶಿಕ್ಷಣ ಸಹಾಯಕ ಪ್ರಾಧ್ಯಾಪಕರಾಗಿ ದಿ: 8–2–2008 ರಂದು ಹಾಜರಾಗಿರುವರು. ಈ ವಿಷಯವನ್ನು ಸಿಂಡಿಕೇಟ್ ಸಭೆ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ:–

**ಈ ವಿಷಯ ಕುರಿತು ಚರ್ಚಿಸಿ ಡಾ. ಹನುಮಂತಯ್ಯ ಪೂಜಾರಿ, ಸಹಾಯಕ ಪ್ರಾಧ್ಯಾಪಕರು, ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಜ್ಞಾನ ಅಧ್ಯಯನ ವಿಭಾಗ ಇವರ ವೇತನ ಶ್ರೇಣಿಯಲ್ಲಿ AGP ಯನ್ನು ರೂ. 6000/– ರಿಂದ 7000/–ಗಳ ಬಡ್ತಿಗೆ ಅರ್ಹರಾಗುವ ದಿ:10–08–2014 ರಿಂದ ನೀಡಲು ಅನುಮೋದಿಸಲಾಯಿತು.**

## ದಿನಾಂಕ:20–05–2017ರಂದು ಜರುಗಿದ 98ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು

## *ಸಿಂಡಿಕೇಟ್ ಐಟಂ ಸಂಖ್ಯೆ: 06*

**ವಿಷಯ** :–ಮಹಿಳಾ ವಿಶ್ವವಿದ್ಯಾನಿಲಯದ ಅರ್ಥಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಪ್ರಾಧ್ಯಾಪಕರೆಂದು ಪದೋನ್ನತಿ ಹೊಂದಿದ ಪ್ರೊ. ಡಿ. ಎಮ್. ಮದರಿ, ಇವರ ಪ್ರೊಬೇಶನರಿ ಪೀರಿಯಡ್‌ನ್ನು ಘೋಷಿಸುವ ಕುರಿತು.

**ಉಲ್ಲೇಖ**:– ಕಛೇರಿ ಆದೇಶ ಸಂಖ್ಯೆ:KSWUB/ADM/PROM)CAS/2016-17/185, dt :27-04-2016.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ 1 ರ ಕಛೇರಿ ಅಧಿಸೂಚನೆಯನ್ವಯ ಮಹಿಳಾ ವಿಶ್ವವಿದ್ಯಾನಿಲಯದ ಅರ್ಥಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಪ್ರಾಧ್ಯಾಪಕರೆಂದು ಪದೋನ್ನತಿ ಹೊಂದಿದ ಪ್ರೊ. ಡಿ, ಎಮ್ ಮದರಿ, ಇವರಿಗೆ ಕೆ.ಸಿ.ಎಸ್.ಆರ್ ನಿಯಮ 1958 ರ ಪ್ರಕಾರ ಹುದ್ದೆಗೆ ಹಾಜರಾದ ದಿನಾಂಕದಿಂದ ಒಂದು ವರ್ಷದ ಅವಧಿಗೆ (ಅವರ ಹೆಸರಿನ ಮುಂದೆ ತೋರಿಸಿದ ದಿನಾಂಕಕ್ಕೆ) ತೃಪ್ತಿಕರವಾಗಿ ಸೇವೆ ಪೂರ್ಣಗೊಳಿಸಿರುತ್ತಾರೆಂದು ಪ್ರೊಬೇಶನರಿ ಪೀರಿಯಡ್‌ನ್ನು ಘೋಷಿಸಬೇಕಾಗಿದೆ. ಕಾರಣ ಸದರಿ ವಿಷಯವನ್ನು ಸಿಂಡಿಕೇಟ ಸಭೆಯ ಅವಗಾಹನೆಗೆ ಹಾಗೂ ನಿರ್ಣಯಕ್ಕೆ ಸಲ್ಲಿಸಿದೆ.

| **ಕ್ರಸಂ** | **ಬೋಧಕ ಸಿಬ್ಬಂದಿಗಳ ಹೆಸರು** | **ವಿಭಾಗ** | **ಹುದ್ದೆ** | **ಅಧಿಸೂಚನೆ ದಿನಾಂಕ** | **ಪರೀಕ್ಷಾ ಅವಧಿ ಘೋಷಿಸುವ ದಿನಾಂಕ** |
|---|---|---|---|---|---|
| 1 | ಪ್ರೊ. ಡಿ. ಎಮ್ ಮದರಿ | ಅರ್ಥಶಾಸ್ತ್ರ | ಪ್ರಾಧ್ಯಾಪಕರು | 27–4–2016 | 26–4–2017 |

*ನಿರ್ಣಯ:–*

**ಪ್ರೊ. ಡಿ. ಎಮ್. ಮದರಿ, ಪ್ರಾಧ್ಯಾಪಕರು, ಅರ್ಥಶಾಸ್ತ್ರ ಅಧ್ಯಯನ ವಿಭಾಗ, ಅಮವಿವಿ ಅವರ ಪ್ರೊಬೇಶನರಿ ಪೀರಿಯಡ್ ತೃಪ್ತಿಕರವಾಗಿದೆ ಎಂದು ಘೋಷಿಸಲು ಅನುಮೋದಿಸಲಾಯಿತು.**

## ದಿನಾಂಕ:20–05–2017ರಂದು ಜರುಗಿದ 98ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು

## *ಸಿಂಡಿಕೇಟ್ ಐಟಂ ಸಂಖ್ಯೆ: 07*

**ವಿಷಯ**: ಶ್ರೀ.ರಾಜಶೇಖರ ಸವನೂರು, Liaison Officer, ಅಕ್ಕಮಹಾದೇವಿ ಮಹಿಳಾ

ವಿಶ್ವವಿದ್ಯಾನಿಲಯ, ವಿಜಯಪುರ ಇವರ ಕಾರ್ಯಪ್ರಗತಿ ವರದಿಯನ್ನು ಪರಿಶೀಲಿಸಿ ಸೇವೆಯನ್ನು ಮುಂದುವರೆಸುವ ಕುರಿತು.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀ.ರಾಜಶೇಖರ ಸವನೂರು ಇವರನ್ನು Liaison Officer (Liaison Representative) ಎಂದು ದಿನಾಂಕ:11-09-2014ರಿಂದ ರೂ.25,000/-ಗಳ ಗೌರವಧನ ನಿಗದಿಪಡಿಸಿ ಒಂದು ವರ್ಷದ ಅವಧಿಗೆ ನೇಮಕಾತಿ ಮಾಡಲಾಗಿತ್ತು. ಅದರಂತೆ ಸದರಿಯವರು ಸೇವೆಯನ್ನು ಮುಂದುವರೆಸಿ ಗೌರವಧನವನ್ನು ಹೆಚ್ಚಿಸಲು ಕೋರಿದ್ದರು. ಅದರಂತೆ ದಿನಾಂಕ:22-08-2016ರಂದು 2015-16ನೇ ಸಾಲಿನ ಕಾರ್ಯಪ್ರಗತಿ ವರದಿಯನ್ನು ಸಲ್ಲಿಸಲು ಸೂಚಿಸಲಾಗಿತ್ತು. ಸದರಿಯವರು ದಿನಾಂಕ:15-11-2016 ರಂದು ಕಾರ್ಯಪ್ರಗತಿ ವರದಿಯನ್ನು ಸಲ್ಲಿಸಿರುತ್ತಾರೆ.

ಸದರಿಯವರ ಕಾರ್ಯಪ್ರಗತಿ ವರದಿಯನ್ನು ಪರಿಶೀಲಿಸಿ ಸೇವೆಯನ್ನು ಮುಂದುವರೆಸಲು ಸಿಂಡಿಕೇಟ್ ಸಭೆಯ ಅವಗಾಹನೆಗಾಗಿ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:-**

**ಶ್ರೀ.ರಾಜಶೇಖರ ಸವನೂರು, ಇವರ ಸೇವೆಯು ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರದಲ್ಲಿ ಅಗತ್ಯವಿರುವುದಿಲ್ಲವೆಂದು ತೀರ್ಮಾನಿಸಲಾಯಿತು.**

**<u>ದಿನಾಂಕ:20-05-2017ರಂದು ಜರುಗಿದ 98ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು</u>**

## *ಸಿಂಡಿಕೇಟ್ ಐಟಂ ಸಂಖ್ಯೆ: 08*

Sub: Award of Emeritus Fellowship to Prof.Vijaya S.S. for the Year 2017-18

With reference to the subject cited above, letter No: F.6-6/2017-18/EMERITUS-2017-18-GEN-9523/SA-II), dated 07$^{th}$ April 2017 from Dr.Sunita Siwach, Joint Secretary, University Grants Commission, New Delhi has informed that on the recommendations of the Expert Committee, the UGC has agreed to offer Emeritus Fellowship to Prof.S.S.Vijaya. Hence, Prof.Vijaya S.S. has joined as Emeritus Professor on 11-04-2017 and submitted Joining Report and undertaking form. Hence, the same is kept for kind perusal of Syndicate.

*ನಿರ್ಣಯ:-*

**ಪ್ರೊ.ವಿಜಯಾ.ಎಸ್.ಎಸ್. ಇವರಿಗೆ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದಲ್ಲಿ ಪ್ರಥಮವಾಗಿ Emeritus Fellowship ದೊರೆತಿರುವ ಕಾರಣ, ಎಲ್ಲ ಸದಸ್ಯರು ಶ್ಲಾಘಿಸಿ ಅಭಿನಂದಿಸಿದರು.**

**<u>ದಿನಾಂಕ:20-05-2017ರಂದು ಜರುಗಿದ 98ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು</u>**

## *ಸಿಂಡಿಕೇಟ್ ಐಟಂ ಸಂಖ್ಯೆ: 09*

**ವಿಷಯ:-** ದಿನಾಂಕ:30-03-2017ರಂದು ಜರುಗಿದ ಹಣಕಾಸು ಸಮಿತಿ ಸಭೆಯ ನಡವಳಿಗಳನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ: ಹಣಕಾಸು ಸಮಿತಿ ಸಭೆಯ ಮೂರು ನಡವಳಿಗಳ ಕುರಿತು ಸುದೀರ್ಘವಾಗಿ ಚರ್ಚಿಸಿ ಅನುಮೋದಿಸಲಾಯಿತು.**

**ದಿನಾಂಕ:20–05–2017ರಂದು ಜರುಗಿದ 98ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು**

## *ಸಿಂಡಿಕೇಟ್ ಐಟಂ ಸಂಖ್ಯೆ: 10*

**ವಿಷಯ:–** ದಿನಾಂಕ:30–03–2017ರಂದು ಜರುಗಿದ ಖರೀದಿ ಸಮಿತಿ ಸಭೆಯ ನಡವಳಿಗಳನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ: ಖರೀದಿ ಸಮಿತಿ ಸಭೆಯ ಹದಿನಾಲ್ಕು ನಡವಳಿಗಳ ಕುರಿತು ಸುದೀರ್ಘವಾಗಿ ಚರ್ಚಿಸಿ ಅನುಮೋದಿಸಲಾಯಿತು.**

**ದಿನಾಂಕ:20–05–2017ರಂದು ಜರುಗಿದ 98ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು**

## *ಸಿಂಡಿಕೇಟ್ ಐಟಂ ಸಂಖ್ಯೆ: 11*

**ವಿಷಯ:–** ಸ್ನಾತಕ ಅಧ್ಯಯನ ಮಂಡಳಿಯು ಪುನರಚಿಸುವ ಕುರಿತು.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, 2017–18ನೇ ಸಾಲಿನಿಂದ ಮೂರು ವರ್ಷಗಳ ಅವಧಿಗೆ ವಿವಿಧ ವಿಭಾಗಗಳ ಸ್ನಾತಕ ಅಧ್ಯಯನ ಮಂಡಳಿಗಳನ್ನು ಪುನರಚಿಸಬೇಕಾಗಿರುತ್ತದೆ. ಅದರಂತೆ ಸದರಿ ಸ್ನಾತಕ ಅಧ್ಯಯನ ಮಂಡಳಿಗಳ ಪಟ್ಟಿಗಳನ್ನು ಸಭೆಯಲ್ಲಿ ಮಂಡಿಸಲಾಗುವುದು. ಆದ್ದರಿಂದ ಈ ವಿಷಯವು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:–**

**2017–18ನೇ ಸಾಲಿನಿಂದ ಮೂರು ವರ್ಷಗಳ ಅವಧಿಗೆ ವಿವಿಧ ವಿಷಯಗಳ ಸ್ನಾತಕ ಅಧ್ಯಯನ ಮಂಡಳಿಗಳನ್ನು ಪುನರಚಿಸಲು ಅನುಮೋದಿಸಲಾಯಿತು.**

**ದಿನಾಂಕ:20–05–2017ರಂದು ಜರುಗಿದ 98ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು**

## *ಸಿಂಡಿಕೇಟ್ ಪುರವಣಿ ಸಂಖ್ಯೆ: 01*

**ವಿಷಯ:–** ಮಂಡ್ಯ ಹೊರಾವರಣ ಕೇಂದ್ರಕ್ಕೆ ವಿಶೇಷಾಧಿಕಾರಿಗಳನ್ನು ಮುಂದುವರೆಸುವ ಕುರಿತು.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಮಂಡ್ಯ ಹೊರಾವರಣ ಕೇಂದ್ರಕ್ಕೆ ವಿಶೇಷಾಧಿಕಾರಿಗಳನ್ನಾಗಿ ಡಾ.ಎನ್.ಚಂದ್ರಪ್ಪ ಇವರನ್ನು ನೇಮಿಸಲಾಗಿತ್ತ. ಸದರಿಯವರ ಅವಧಿಯು ದಿನಾಂಕ:11–05–2017 ರಂದು ಮುಕ್ತಾಯವಾಗಿದ್ದು, ಸದರಿಯವರ ಮೇಲಿನ ಉಲ್ಲೇಖದ ಪತ್ರದನ್ವಯ ಮುಂದಿನ ಒಂದು ವರ್ಷದ ಅವಧಿಗೆ ವಿಶೇಷಾಧಿಕಾರಿಯಾಗಿ ಮುಂದುವರೆಸಲು ವಿನಂತಿಸಿದ ಪ್ರಯುಕ್ತ ಈ ವಿಷಯವು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:–**

**ಮುಂದಿನ ಶೈಕ್ಷಣಿಕ ವರ್ಷದಿಂದ ಮಂಡ್ಯ ಹೊರಾವರಣ ಕೇಂದ್ರದಲ್ಲಿ ಕಟ್ಟಡ ಕಾಮಗಾರಿ ಕೆಲಸವನ್ನು ಕಾರ್ಯರೂಪಕ್ಕೆ ತರುವುದರಿಂದ ಡಾ.ಎನ್.ಚಂದ್ರಪ್ಪ, ಡೀನರು & ಪ್ರಾಧ್ಯಾಪಕರು ಶಿಕ್ಷಣ ಅಧ್ಯಯನ ವಿಭಾಗ ಇವರನ್ನು ವಿಶೇಷಾಧಿಕಾರಿಯಾಗಿ ಇನ್ನು ಒಂದು ವರ್ಷ ಮುಂದುವರೆಸಲು ತೀರ್ಮಾನಿಸಲಾಯಿತು.**

**ದಿನಾಂಕ:20-05-2017ರಂದು ಜರುಗಿದ 98ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು**

## *ಸಿಂಡಿಕೇಟ್ ಪುರವಾಣಿ ಸಂಖ್ಯೆ: 02*

**ವಿಷಯ:**-ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ ವಿಜಯಪುರ ಇದರ ಅಧೀನದ ಅಕ್ಕಮಹಾದೇವಿ ಸಂಶೋಧನಾ, ಅಭಿವೃದ್ಧಿ ಕೌಶಲ್ಯ ಹಾಗೂ ವಿಸ್ತರಣಾ ಕೇಂದ್ರ ಉಡುತಡಿ(ಶಿವಮೊಗ್ಗಾ ಜಿಲ್ಲೆ ಶಿಕಾರಿಪುರ) ಉದ್ಘಾಟಣೆ ಕುರಿತು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:-**

**ಅನುಮೋದಿಸಲಾಯಿತು ಹಾಗೂ ಮಾನ್ಯ ಕುಲಪತಿಗಳು ದಿನಾಂಕ:29-05-2017 ರಂದು ಅಕ್ಕಮಹಾದೇವಿ ಸಂಶೋಧನಾ, ಅಭಿವೃದ್ಧಿ ಕೌಶಲ್ಯ ಹಾಗೂ ವಿಸ್ತರಣಾ ಕೇಂದ್ರ ಉಡುತಡಿ(ಶಿವಮೊಗ್ಗಾ ಜಿಲ್ಲೆ ಶಿಕಾರಿಪುರ) ಉದ್ಘಾಟಣೆ ಕುರಿತು ವಿವರಿಸಿ ಎಲ್ಲ ಸದಸ್ಯರನ್ನು ಈ ಕಾರ್ಯಕ್ರಮಕ್ಕೆ ಆಹ್ವಾನಿಸಿದರು.**

**ದಿನಾಂಕ:20-05-2017ರಂದು ಜರುಗಿದ 98ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು**

## *ಸಿಂಡಿಕೇಟ್ ಪುರವಾಣಿ ಸಂಖ್ಯೆ: 03*

**ವಿಷಯ :** ಮಹಿಳಾ ವಿಶ್ವವಿದ್ಯಾಲಯದ ಪ.ಜಾ/ಪ.ಪಂ ಖಾಯಂ ಅಧ್ಯಾಪಕರುಗಳಿಗೆ ಹಾಗೂ ಸಂಶೋಧನಾ ವಿದ್ಯಾರ್ಥಿನಿಯರಿಗೆ ಅಮೇರಿಕಾದ ಕೊಲಂಬಿಯಾ ವಿಶ್ವವಿದ್ಯಾಲಯಕ್ಕೆ ಭೇಟಿ ನೀಡಲು ಅನುಮತಿಸುವ ಕುರಿತು.

**ಉಲ್ಲೇಖ:** ದಿ: 18/10/2016 ಪ.ಜಾ/ಪ.ಪಂ ಘಟಕದ ಸಲಹಾ ಸಮಿತಿ ಸಭೆಯ ನಡಾವಳಿಗಳು.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಮಹಿಳಾ ವಿಶ್ವವಿದ್ಯಾಲಯದ ದಿನಾಂಕ : 11/11/2016 ರಂದು ಜರುಗಿದ ಸಿಂಡಿಕೇಟ್ ಸಭೆಯ ಪುರವಣಿ ಸಂಖ್ಯೆ : 2 ಪ್ರಕಾರ ದಿನಾಂಕ : 18/10/2016 ರಂದು ಪ.ಜಾ/ಪ.ಪಂ ಘಟಕದ ವತಿಯಿಂದ ಜರುಗಿದ ಸಲಹಾ ಸಮಿತಿ ಸಭೆಯ ಎಲ್ಲಾ ನಡಾವಳಿಗಳನ್ನು ಅನುಮೋದಿಸಲಾಯಿತು. ಸಲಹಾ ಸಮಿತಿ ಸಭೆಯ ಅಜೆಂಡಾ ಸಂಖ್ಯೆ : 3 ಹಾಗೂ 4 ರ ಪ್ರಕಾರ ಮಹಿಳಾ ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಪ.ಜಾ/ಪ.ಪಂ.ದ ಖಾಯಂ ಅಧ್ಯಾಪಕರುಗಳಿಗೆ ಮತ್ತು ಸಂಶೋಧನಾ ವಿದ್ಯಾರ್ಥಿನಿಯರಿಗೆ (ಪೂರ್ಣ ಅವಧಿ)ಅಂತರ್‌ರಾಷ್ಟ್ರೀಯ ಮತ್ತು ರಾಷ್ಟ್ರೀಯ ಸಮ್ಮೇಳನಗಳು, ಕಾರ್ಯಾಗಾರಗಳು, ವಿಶ್ವವಿಖ್ಯಾತ ವಿದ್ಯಾಸಂಸ್ಥೆಗಳನ್ನು ಸಂದರ್ಶಿಸಲು ಮತ್ತು ವಿಚಾರ ಸಂಕಿರಣಗಳಲ್ಲಿ ಭಾಗವಹಿಸಲು ಪ್ರಾಧ್ಯಾಪಕರುಗಳಿಗೆ ಯು.ಜಿ.ಸಿ ನಿಯಮಾವಳಿಯ ಪ್ರಕಾರ ದಿನಭತ್ಯೆ, ಪ್ರಯಾಣಭತ್ಯೆ, ವಸತಿ, ನೊಂದಣಿ ಶುಲ್ಕ, ವೀಸಾ ಶುಲ್ಕ, ಸ್ಥಳೀಯ ಸಾರಿಗೆ ಮತ್ತು ಇತರೆ ಖರ್ಚುಗಳಿಗೆ ಧನಸಹಾಯ ನೀಡಲು ಸಭೆಯಲ್ಲಿ ತಿರ್ಮಾನಿಸಲಾಯಿತು. ಕಾರಣ ಡಾ.ಬಿ.ಆರ್.ಅಂಬೇಡ್ಕರ ರವರ 125 ನೇ ಜನ್ಮ ವರ್ಷಾಚರಣೆ ಪ್ರಯುಕ್ತ ಅಮೇರಿಕಾದ ಕೊಲಂಬಿಯಾ ವಿಶ್ವವಿದ್ಯಾಲಯಕ್ಕೆ ಪ್ರವಾಸ ಹೊಗುವ ಮಹಿಳಾ ವಿಶ್ವವಿದ್ಯಾಲಯದ ಪ.ಜಾ/ಪ.ಪಂ ಗೆ ಸೇರಿದ ಒಟ್ಟು 08 ಖಾಯಂ ಪ್ರಾಧ್ಯಾಪಕರುಗಳ ಹಾಗು 04 ಪೂರ್ಣಕಾಲಿಕ ಸಂಶೋಧನಾ ವಿಧ್ಯಾರ್ಥಿನಿಯರ ವಿವರ ಈ ಕೆಳಗಿನಂತಿದೆ.

ಒಟ್ಟು 08 ಖಾಯಂ ಪ್ರಾಧ್ಯಾಪಕರುಗಳಿಗೆ ಹಾಗೂ 04 ಸಂಶೋಧನಾ ವಿದ್ಯಾರ್ಥಿನಿಯರಿಗೆ ಅಮೇರಿಕಾದ ಕೊಲಂಬಿಯಾ ವಿಶ್ವವಿದ್ಯಾಲಯಕ್ಕೆ ಭೇಟಿ ನೀಡಿ ಡಾ.ಬಿ.ಆರ್.ಅಂಬೇಡ್ಕರ ರವರ ಅಧ್ಯಯನ ಕೇಂದ್ರ, ಗ್ರಂಥಾಲಯದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ ರವರ ಪುತ್ಥಳಿ ಹಾಗೂ ವಸ್ತು ಸಂಗ್ರಹಾಲಯಗಳ ಸಂದರ್ಶನ ಮಾಡಲು ಸಂಭವನೀಯ ದಿನಾಂಕ : 23/06/2017 ರಿಂದ 04/07/2017 ರ ವರೆಗೆ ಒಟ್ಟು 12 ದಿನಗಳ ವರೆಗೆ ಹೋಗಿ ಬರಲು ಮತ್ತು ಸದರಿ ಪ್ರವಾಸಕ್ಕೆ ಪ್ರತಿ ಸದಸ್ಯರಿಗೆ ತಗಲುವ ಅಂದಾಜು ವೆಚ್ಚ ರೂ. 2,60,000/-

(ಎರಡು ಲಕ್ಷ ಅರವತ್ತು ಸಾವಿರ ರೂಪಾಯಿಗಳು) ಯಂತೆ ಒಟ್ಟು 12 ಜನ ಸದಸ್ಯರಿಗೆ ತಗಲುವ ಅಂದಾಜು ವೆಚ್ಚ ರೂ. 31,20,000/- (ಮೂವತ್ತೊಂದು ಲಕ್ಷ ಇಪ್ಪತ್ತು ಸಾವಿರ ರೂಪಾಯಿಗಳು) ಗಳನ್ನು ಅನುಮತಿಸಿ ಅನುಮೋದಿಸಲು ಕೋರಿ ಸಿಂಡಿಕೇಟ್ ಸಭೆಯ ಅವಹಗಾನೆಗಾಗಿ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

| ಕ್ರ.ಸಂ | ಪ್ರಾಧ್ಯಾಪಕರು/ಸಂಶೋಧನಾ ವಿದ್ಯಾರ್ಥಿನಿಯರು | ವಿಭಾಗ |
|---|---|---|
| 1. | ಪ್ರೊ. ಡಿ.ಎಂ.ಮದರಿ, ಪ್ರಾಧ್ಯಾಪಕರು | ಅರ್ಥಶಾಸ್ತ್ರ ಅಧ್ಯಯನ ವಿಭಾಗ |
| 2. | ಡಾ. ಸಕ್ಪಾಲ ಹೂವಣ್ಣ, ಸಹಾಯಕ ಪ್ರಾಧ್ಯಾಪಕರು | ದೈಹಿಕ ಶಿಕ್ಷಣ ಅಧ್ಯಯನ ವಿಭಾಗ |
| 3. | ಡಾ. ಡಿ.ಎಂ.ಜ್ಯೋತಿ, ಸಹಾಯಕ ಪ್ರಾಧ್ಯಾಪಕರು | ದೈಹಿಕ ಶಿಕ್ಷಣ ಅಧ್ಯಯನ ವಿಭಾಗ |
| 4. | ಡಾ. ಲಕ್ಷ್ಮೀದೇವಿ ಅಲ್ಕೋಡ, ಸಹಾಯಕ ಪ್ರಾಧ್ಯಾಪಕರು | ಮಹಿಳಾ ಅಧ್ಯಯನ ವಿಭಾಗ |
| 5. | ಡಾ. ಶಾಂತಾದೇವಿ.ಟಿ, ಸಹಾಯಕ ಪ್ರಾಧ್ಯಾಪಕರು | ಗ್ರಂಥಾಲಯ ಹಾಗೂ ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗ |
| 6. | ಡಾ. ಸಂಜೀವಕುಮಾರ ಗಿರಿ, ಸಹಾಯಕ ಪ್ರಾಧ್ಯಾಪಕರು | ಔಷಧೀಯ ರಸಾಯನ ಶಾಸ್ತ್ರ ಅಧ್ಯಯನ ವಿಭಾಗ |
| 7. | ಶ್ರೀ. ದೀಪಕ ಶಿಂಧೆ, ಸಹಾಯಕ ಪ್ರಾಧ್ಯಾಪಕರು | ಇಂಗ್ಲೀಷ್ ಅಧ್ಯಯನ ವಿಭಾಗ |
| 8. | ಶ್ರೀಮತಿ. ಶೀತಲ ರಾಣಿ, ಸಹಾಯಕ ಪ್ರಾಧ್ಯಾಪಕರು | ಗಣಕ ಅಧ್ಯಯನ ವಿಭಾಗ |
| 9. | ಶ್ರೀಮತಿ. ಡಿ. ಸರಸ್ವತಿ, ಸಂಶೋಧನಾ ವಿದ್ಯಾರ್ಥಿನಿ | ಮಹಿಳಾ ಅಧ್ಯಯನ ವಿಭಾಗ |
| 10. | ಕುಮಾರಿ ಅನಿತಾ ಪಾತ್ರೋಟ, ಸಂಶೋಧನಾ ವಿದ್ಯಾರ್ಥಿನಿ | ಗಣಕ ಅಧ್ಯಯನ ವಿಭಾಗ |
| 11. | ಕುಮಾರಿ ಭುವನೇಶ್ವರಿ ಕಾಂಬಳೆ, ಸಂಶೋಧನಾ ವಿದ್ಯಾರ್ಥಿನಿ | ಮಹಿಳಾ ಅಧ್ಯಯನ ವಿಭಾಗ |
| 12. | ಶ್ರೀಮತಿ. ರೂಪಾ ಜೋಗಳೇಕರ್, ಸಂಶೋಧನಾ ವಿದ್ಯಾರ್ಥಿನಿ | ಸಮಾಜಶಾಸ್ತ್ರ ವಿಭಾಗ |

**ನಿರ್ಣಯ:-**

**ಈ ವಿಷಯ ಕುರಿತು ಚರ್ಚಿಸಿ, ನಿರ್ದೇಶಕರು ಪ.ಜಾ/ಪ.ಪಂ ಘಟಕ ಅವರಿಂದ ಸ್ಪಷ್ಟೀಕರಣ ಪಡೆದು ದಿನಾಂಕ : 23-06-2017 ರಿಂದ 04-07-2017 ರ ವರೆಗೆ ಒಟ್ಟು 12 ದಿನಗಳ ವರೆಗೆ 08 ಖಾಯಂ ಪ್ರಾಧ್ಯಾಪಕರುಗಳಿಗೆ ಹಾಗೂ 04 ಸಂಶೋಧನಾ ವಿದ್ಯಾರ್ಥಿನಿಯರಿಗೆ ಅಮೇರಿಕಾದ ಕೊಲಂಬಿಯಾ ವಿಶ್ವವಿದ್ಯಾಲಯಕ್ಕೆ ಭೇಟಿ ನೀಡಲು ಅನುಮೋದಿಸಲಾಯಿತು.**

## ದಿನಾಂಕ:20-05-2017ರಂದು ಜರುಗಿದ 98ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು

## *ಸಿಂಡಿಕೇಟ್ ಪುರವಣಿ ಸಂಖ್ಯೆ: 04*

**ವಿಷಯ :** ಮಹಿಳಾ ವಿಶ್ವವಿದ್ಯಾಲಯದ ಪ.ಜಾ/ಪ.ಪಂ ಸಂಶೋಧನಾ ವಿದ್ಯಾರ್ಥಿನಿಯರಿಗೆ ಬ್ಯಾಂಕಾಕ್ ನಲ್ಲಿ ಜರುಗಿದ ಅಂತರ್‌ರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಲು ಘಟನೋತ್ತರವಾಗಿ ಅನುಮತಿಸುವ ಕುರಿತು.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಪ.ಜಾ/ಪ.ಪಂ. ಗೆ ಸೇರಿದ ವಿವಿಧ ವಿಭಾಗಗಳ ಸಂಶೋಧನಾ ವಿದ್ಯಾರ್ಥಿನಿಯರು ದಿನಾಂಕ : 03/05/2017 ರಿಂದ 10-05-2017 ರ ವರೆಗೆ (8 ದಿನಗಳು) **ಬ್ಯಾಂಕಾಕ್ ನಲ್ಲಿ** ಜರುಗಿದ ಅಂತರ್‌ರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಿ ಸಂಶೋಧನಾ ಪ್ರಬಂಧಗಳನ್ನು ಮಂಡಿಸಿರುತ್ತಾರೆ. ಸದರಿಯವರಿಗೆ ಯು.ಜಿ.ಸಿ ನಿಯಮಾವಳಿಯ ಪ್ರಕಾರ ದಿನಭತ್ಯೆ, ಪ್ರಯಾಣಭತ್ಯೆ, ವಸತಿ, ನೊಂದಣಿ ಶುಲ್ಕ, ವೀಸಾ ಶುಲ್ಕ, ಸ್ಥಳೀಯ ಸಾರಿಗೆ ಮತ್ತು ಇತರೆ ಖರ್ಚುಗಳಿಗೆ ಧನಸಹಾಯ ನೀಡಲು ಘಟನೋತ್ತರವಾಗಿ ಅನುಮೋದಿಸಲು ಸಿಂಡಿಕೇಟ್ ಅವಗಾಹನೆಗಾಗಿ ಮತ್ತು ಅನುಮೋದನೆಗಾಗಿ ಮಂಡಿಸಲಾಗಿದೆ.

**ಸಂಶೋಧನಾ ವಿಧ್ಯಾರ್ಥಿನಿಯರ ವಿವರ ಈ ಕೆಳಗಿನಂತಿದೆ**

| ಕ್ರ.ಸಂ | **ಸಂಶೋಧನಾ ವಿದ್ಯಾರ್ಥಿನಿಯರು (ಪೂರ್ಣಕಾಲಿಕ)** | **ವಿಭಾಗ** |
|---|---|---|
| 1. | ಶುಭಾಂಗಿ ನಾಟಿಕಾರ | ಎಮ್. ಬಿ. ಎ. ವಿಭಾಗ |
| 2. | ರೇಶ್ಮಾ ಗಜಕೋಶ | ಅರ್ಥಶಾಸ್ತ್ರ ಅಧ್ಯಯನ ವಿಭಾಗ |
| 3. | ಕುಮಾರಿ ಸಾತಮ್ಮ | ಅರ್ಥಶಾಸ್ತ್ರ ಅಧ್ಯಯನ ವಿಭಾಗ |
| 4. | ಪೂರ್ಣಿಮಾ ಕೆ | ಕನ್ನಡ ಅಧ್ಯಯನ ವಿಭಾಗ |
| 5. | ರೇಣುಕಾ ಪೂಜಾರಿ | ಗ್ರಂಥಾಲಯ ಹಾಗೂ ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗ |
| 6. | ಸುಧಾ ಜೈನಾಪುರ | ಶಿಕ್ಷಣ ಅಧ್ಯಯನ ವಿಭಾಗ |
| 7. | ವಿಜಯಲಕ್ಷ್ಮೀ. ಪವಾರ | ಶಿಕ್ಷಣ ಅಧ್ಯಯನ ವಿಭಾಗ |

ನಿರ್ಣಯ:–

*ಘಟನೋತ್ತರ ಅನುಮೋದನೆ ನೀಡಲಾಯಿತು.*

## ದಿನಾಂಕ:20–05–2017ರಂದು ಜರುಗಿದ 98ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು

## *ಸಿಂಡಿಕೇಟ್ ಪುರವಾಣಿ ಸಂಖ್ಯೆ: 05*

**ವಿಷಯ:–** ದಿನಾಂಕ:26–04–2017ರಂದು ಜರುಗಿದ ಕಟ್ಟಡ ಸಮಿತಿ ಸಭೆಯ ನಡವಳಿಗಳನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ:

**ಕಟ್ಟಡ ಸಮಿತಿ ಸಭೆಯ ಐದು ನಡವಳಿಗಳ ಕುರಿತು ಸುದೀರ್ಘವಾಗಿ ಚರ್ಚಿಸಿ ಅನುಮೋದಿಸಲಾಯಿತು.**

**ಕುಲಸಚಿವರಾದ ಪ್ರೊ.ಕೆ.ಪಿ.ಶ್ರೀನಾಥ್ ಅವರು ಸಭೆಯನ್ನು ಅರ್ಥಪೂರ್ಣಗೊಳಿಸಿದ ಹಾಗೂ ಮೌಲ್ಯಾಧಾರಿತ, ಸೂಕ್ತ ಸಲಹೆಗಳನ್ನು ಮುಂದಿಟ್ಟ ಎಲ್ಲ ಸದಸ್ಯರಿಗೆ ವಂದನೆಗಳನ್ನು ಸಲ್ಲಿಸಿದರು.**

**ಕುಲಸಚಿವರು ಹಾಗೂ ಸದಸ್ಯ–ಕಾರ್ಯದರ್ಶಿಗಳು**
ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ,
ವಿಜಯಪುರ

**ಕುಲಪತಿಗಳು ಹಾಗೂ ಸಭಾಧ್ಯಕ್ಷರು**
ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ,
ವಿಜಯಪುರ